ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE: 19/2/2020

# ಪ್ರಮಾಣ ವಚನ ಸ್ವೀಕರಿಸಿದ ಸವದಿ

ವಾಣಿ 19/2/2020



ವಿಧಾನಪರಿಷತ್ ಸದಸ್ಯರಾಗಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ, ವಿಧಾನ ಪರಿಷತ್ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಅವರು ಅಭಿನಂದಿಸಿದರು.

**ವಿಧಾನ ಪರಿಷತ್ತು:** ವಿಧಾನ ಪರಿಷತ್ ಉಪಚು ನಾವಣೆಯಲ್ಲಿ ಗೆಲುವು ಸಾಧಿಸಿದ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಪರಿಷತ್ ನೂತನ ಸದಸ್ಯರಾಗಿ ಭಗವಂತ ಮತ್ತು ಸತ್ಯನಿಷ್ಠೆಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

ವಿಧಾನಸೌಧದಲ್ಲಿ ಮಂಗಳವಾರ ಎರಡನೇ ದಿನದ ವಿಧಾನ ಪರಿಷತ್ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಪ್ರತಾಪ್ ಚಂದ್ರಶೆಟ್ಟಿ ಪ್ರಮಾಣ ವಚನ ಬೋಧಿಸಿದರು. ಭಗವಂತನ ಸಾಕ್ಷಿಯಾಗಿ ಸತ್ಯ ಮತ್ತು ನಿಷ್ಠೆ ಹೆಸರಿನಲ್ಲಿ ಪರಿಷತ್ ಸದಸ್ಯರಾಗಿ ಪ್ರಮಾಣ ವಚನ ಕೈಗೊಂಡರು. ನಂತರ ಪರಿಷತ್ ಸದಸ್ಯರು ಉಪ ಮುಖ್ಯ ಮಂತ್ರಿ ಲಕ್ಷ್ಮಣ್ ಸವದಿ ಅವರನ್ನು ಹಸ್ತಲಾಗವ ಮಾಡುವ ಮೂಲಕ ಅಭಿನಂದಿಸಿದರು.

**ಕಾಗದ ಪತ್ರ ಮಂಡನೆ:** ನೂತನ ಸದಸ್ಯರ ಪ್ರಮಾಣ ವಚನದ ಬಳಿಕ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ, ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಡಾ. ಅಶ್ವತ್ಥನಾರಾಯಣ್, ಸಚಿವರಾದ ಜೆ.ಸಿ.ಮಾಧುಸ್ವಾಮಿ, ಶ್ರೀರಾಮುಲು, ಕೆ. ಎಸ್.ಈಶ್ವರಪ್ಪ, ಸುರೇಶ್ ಕುಮಾರ್, ಪ್ರಭು ಚೌಹಾಣ್, ರಮೇಶ್ ಜಾರಕಿಹೊಳಿ, ಬೈರತಿ ಬಸವರಾಜು, ಬಿ.ಸಿ.ಪಾಟೀಲ್, ಕೆ.ಸಿ.ನಾರಾಯಣಗೌಡ, ಜಗದೀಶ್ ಶೆಟ್ಟರ್, ಶಿವರಾಂ ಹೆಬ್ಬಾರ್, ಎಚ್.ನಾಗೇಶ್ ಅವರ ಹೆಸರಿನ ಕಾಗದ ಪತ್ರಗಳನ್ನು ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಸದನಕ್ಕೆ ಮಂಡಿಸಿದರು.

ಸಚಿವ ಆನಂದ್‌ಸಿಂಗ್ ಕೂಡ ತಮ್ಮ ಹೆಸರಿನ ಕಾಗದ ಪತ್ರಗಳನ್ನು ಮಂಡಿಸಿದರು. ಈ ವೇಳೆ ಯಾವ ಕಾಗದಪತ್ರ ಎಂದು ಪ್ರತಿಪಕ್ಷ ಸದಸ್ಯರು ಕಾಲೆಳೆದರು. ಆಗ ಕಸಿವಿಸಿಗೊಂಡ ಸಚಿವರು ನನ್ನ ಹೆಸರಿನ ಕಾಗದಪತ್ರವನ್ನು ಮಂಡಿಸುತ್ತಿರುವುದಾಗಿ ಪುನರು ಚ್ಚರಿಸಿದರು. ಸಚಿವರಾದ ವಿ.ಸೋಮಣ್ಣ ಮತ್ತು ಎಸ್ .ಟಿ.ಸೋಮಶೇಖರ್ ಕೂಡ ತಮ್ಮ ಹೆಸರಿನ ಕಾಗದ ಪತ್ರವನ್ನು ಸಭೆಯ ಮುಂದಿಟ್ಟರು.

8